ಹೋಗುತ್ತಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಡ್ರೈನೇಜ್ ವಾಟರ್, ಉಪ್ಪಿನ ನೀರು ನಳದಲ್ಲಿ ಬರುತ್ತಿರುವುದರಿಂದ ಅಶುದ್ಧವಾದ ನೀರನ್ನು ಬಿಡುತ್ತಿರುವುದರಿಂದ ಜನರ ಆರೋಗ್ಯದ ಮೇಲೆ ಗಂಭೀರವಾದ ಸಮಸ್ಯೆ ಉಂಟಾಗಿದೆ. ಆದಷ್ಟು ಶೀಘ್ರವಾಗಿ ಕುಡಿಯಲಿಕ್ಕೆ ಶುದ್ಧವಾದ ನೀರನ್ನು ಕೊಡಲಿಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಆ ರೀತಿ ಏನಾದರೂ ಆಗಿದ್ದರೆ ಆಯುಕ್ತರನ್ನು ಕೇಳಿ ಸೂಕ್ತಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ: ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ, ಆಯುಕ್ತರು ಏನು ಹೇಳಿದರು ಅಂದರೆ ''ಈ ವಿಚಾರವನ್ನು ಅಸೆಂಬ್ಲಿಯಲ್ಲಿ ಎತ್ತಿದರೆ ನೀರು ಕೊಡುವುದನ್ನು ಬಂದ್ ಮಾಡಬೇಕಾಗುತ್ತದೆಂದು'' ಹೇಳಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ಆ ರೀತಿಯ ಬೆದರಿಕೆಯನ್ನು ಆತ ಹಾಕುವುದಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ: ಏಕೆಂದರೆ ಸರ್ಕಾರದಿಂದ ಒತ್ತಡ ಬರುತ್ತದೆ ನಾವು ನೀರು ನಿಲ್ಲಿಸಬೇಕಾಗುತ್ತದೆಂದು ಹೇಳಿದ್ದಾರೆ.

ಅಧ್ಯಕ್ಷರು: ನೀರು ಕೊಡಿಸುವ ವ್ಯವಸ್ಥೆ ಮಾಡಿಸೋಣ.

ಶ್ರೀ ಬಿ.ಎನ್.ಬಚ್ಚೇಗೌಡ: ಶುದ್ಧ ನೀರು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಚಾಮರಾಜನಗರದಲ್ಲಿರುವ ಉಪ್ಪಾರ ಹಾಗೂ ಮೇಲು ಸಕ್ಕರೆ ಜನಾಂಗದವರಿಗೆ ಸೌಕರ್ಯಗಳನ್ನು ಒದಗಿಸುವುದು

39 (202)

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಸೇರಿದಂತೆ ಹಿಂದುಳಿದ ಗಡಿ ಪ್ರದೇಶಗಳಲ್ಲಿ ಉಪ್ಪಾರ ಹಾಗೂ ಮೇಲು ಸಕ್ಕರೆ ಶೆಟ್ಟರ ಜನಾಂಗದವರು ತೀರ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಜನಾಂಗದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಸದರಿ ಜನಾಂಗಕ್ಕೆ ಎಲ್ಲಾ ರೀತಿಯ ಸೌಲಭ್ಯ ದೊರಕಲು ಸರ್ಕಾರ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದೇ?

ಈ) ಕರಕುಶಲ ಕಲೆಯಲ್ಲಿ ಪ್ರವೀಣರಾಗಿರುವ ಈ ಜನಾಂಗದ ಉನ್ನತಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆ ಸರ್ಕಾರದವರಲ್ಲಿದೆಯೇ?

ಉ) ಈ ಜನಾಂಗವು ಇರುವ ಸ್ಥಳಗಳಲ್ಲಿ ಬಹುತೇಕ ಗುಡಿಸಲಿನಲ್ಲೇ ವಾಸಮಾಡುವುದರಿಂದ ಬೆಂಕಿ ಮಳೆಗಾಳಿಯ ತೊಂದರೆ ತಪ್ಪಿಸಲು ವಿಶೇಷವಾಗಿ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಸರ್ಕಾರ ಹಮ್ಮಿಕೊಳ್ಳುವುದೇ?

ಶ್ರೀ ಮಾಲೀಕಯ್ಯ ಪಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ. ಎಸ್.ಡಬ್ಲ್ಯೂ.ಡಿ. 150 ಬಿ.ಸಿ.ಎ 94 ದಿನಾಂಕದ 17-4-94ರ ಪ್ರಕಾರ ವರ್ಗ- 1ರಲ್ಲಿ ಉಪ್ಪಾರ, ಮೇಲುಸಕ್ಕರೆಯವರು ಹಾಗೂ ಮೇಲು ಸಕ್ಕರೆ ಎಂದು ಹಿಂದುಳಿದ ವರ್ಗಗಳ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಆ) ಉಪ್ಪಾರ ಜನಾಂಗವು ವರ್ಗ- 1ರಲಲ್ಲಿ ಸೆರಿದ್ದು ಈ ಜನರಿಗೆ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಸೌಲಭ್ಯ ವಿದ್ಯಾರ್ಥಿವೇತನ ಹೆಚ್ಚುವರಿ ಊಟದ ವೆಚ್ಚ ಮಂಜೂರು, ಆಶ್ರಮಶಾಲೆಗಳಲ್ಲಿ ಪ್ರವೇಶಕ್ಕೆ ಅವಕಾಶವಿರುತ್ತದೆ. ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕವು ಸಹ ಈ ಜನಾಂಗದ ಜನರಿಗೆ ಸಾಲ ಸೌಲಭ್ಯ ಹಾಗೂ ಇತರೆ ಸೌಲಭ್ಯಗಳು ಇರುತ್ತದೆ.

ಇ) ಇಲ್ಲ.

ಈ) ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಚೈತನ್ಯ - ಕಾರ್ಯಕ್ರಮದಲ್ಲಿ ಬ್ಯಾಂಕ್ ಮೂಲಕ ಸಾಲ ಪಡೆದು ಸ್ವಯಂ ಉದ್ಯೋಗವನ್ನು ಸ್ಥಾಪಿಸಬಹುದಾಗಿದೆ.

ಉ) ಈಗಲೇ 'ಬೆಳ್ಳಬೆಳಕು' ಯೋಜನೆಯಡಿಯಲ್ಲಿ ಪ್ರವರ್ಗ- 1 ಗುಂಪಿಗೆ ಸೇರಿದ ಜನಾಂಗದವರೇ ಹೆಚ್ಚಾಗಿ ವಾಸಿಸುವಂತಹ ಅತಿ ದೂರದ ಗ್ರಾಮಗಳಲ್ಲಿ ಮನೆಗಳನ್ನು ನಿರ್ಮಿಸಿಕೊಡುವ ಕಾರ್ಯಕ್ರಮವಿರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸಾರಿಯೂ ಅವರು ಸರಿಯಾದ ಉತ್ತರವನ್ನು ಒದಗಿಸತಕ್ಕ ಕಾರ್ಯ ಮಾತ್ರ ಮಾಡಿಲ್ಲ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ನಿಮ್ಮ ಕ್ಷೇತ್ರದಲ್ಲಿ ಮೇಲುಸಕ್ಕರೆ

ಶೆಟ್ಟರು ಹಾಗೂ ಉಪ್ಪಾರರು ಎಷ್ಟಿರಬಹುದು?

ಶ್ರೀ ವಾಟಾಳ್ ನಾಗರಾಜ್: ನಮ್ಮ ಕ್ಷೇತ್ರದಲ್ಲಿ ಇರಲಿ, ಮೈಸೂರಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ 20 ಲಕ್ಷ ಇರಬಹುದು.

ಅಧ್ಯಕ್ಷರು: ನಿಮ್ಮ ಕ್ಷೇತ್ರದಲ್ಲಿ ಎಷ್ಟಿರಬಹುದು?

ಶ್ರೀ ವಾಟಾಳ್ ನಾಗರಾಜ್: ಆಮೇಲೆ ತಮಗೆ ಹೇಳುತ್ತೇನೆ. ತಮ್ಮ ಆಸಕ್ತಿಯನ್ನು ನೋಡಿದರೆ ಬಹುಶಃ ನೀವು ನಮಗೆ ಬೆಂಬಲ ಕೊಡುವ ಹಾಗೆ ಕಾಣುತ್ತದೆ. ಹೋದಸಾರಿ ಈ ಪ್ರಶ್ನೆಯನ್ನು ಕೇಳಿದ್ದೆ ಮಾನ್ಯಮಂತ್ರಿಗಳು ಬಹಳ ಕಾಳಜಿ ವಹಿಸಿದ್ದಾರೆಂದು ಕಾಣುತ್ತದೆ. ಅದರ ಬಗ್ಗೆ ನಿಮ್ಮನ್ನು ಕರೆದು ಮಾತನಾಡುತ್ತೇನೆ, ಅವರಿಗೆ ಅನುಕೂಲ ಮಾಡತಕ್ಕ ವ್ಯವಸ್ಥೆ ಮಾಡುತ್ತೇನೆಂದು ಈ ಸದನದಲ್ಲಿ ಭರವಸೆ ಕೊಟ್ಟರು. ಈ ಕ್ಷಣದವರೆಗೂ ಒಂದು ಸಣ್ಣ ಅನುಕೂಲವನ್ನು ಮಾಡಲಿಲ್ಲ. ನಾನು ಇನ್ನು ವಿಧಿಯಿಲ್ಲದೆ ಏನು ಮಾಡಬೇಕೆಂದು ತೋಚದೆ ಮತ್ತೆ ಪ್ರಶ್ನೆಯನ್ನು ತಮ್ಮ ಮೂಲಕ ಕೇಳಿದ್ದೇನೆ. ಈಗ ಅದೇ ಉತ್ತರವನ್ನು ಅವರು ಕೊಟ್ಟಿದ್ದಾರೆ. ಇಲ್ಲಿ ಹೇಳಿದ್ದಾರೆ ಅವರಿಗೆ ''ಬೆಳ್ಳಿ ಬೆಳಕು'' ಎಂದು ಏನೋ ಯೋಜನೆ ಮಾಡಿದ್ದೇವೆಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಅದು ''ಬೆಳ್ಳಿ ಬೆಳಕು'' ಅಲ್ಲ ಅದು ಕರಾಳ ರಾತ್ರಿ. ಆ ಜನಾಂಗದ ದೃಷ್ಟಿಯಲ್ಲಿ ಅದು ಕರಾಳ ರಾತ್ರಿಯಾಗಿದೆ. ನಾನು ತಮಗೆ ಅತ್ಯಂತ ಪ್ರಾಮಾಣಿಕವಾಗಿ ಒತ್ತಾಯ ಮಾಡುತ್ತೇನೆ, ಈ ಜನಾಂಗದ ಬಗ್ಗೆ ವಿಶೇಷವಾದ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಒಂದು ಸಮಿತಿಯನ್ನು ತಾವು ಮಾಡುತ್ತೀರೋ?

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಈ ಪ್ರಶ್ನೆಯನ್ನು ಕೇಳಿದ್ದಾರೆ.

ಅಧ್ಯಕ್ಷರು: ಅವರು ಇನ್ನೂ ಸ್ವಲ್ಪ ಜಾಸ್ತಿ ಕೇಳುತ್ತಾರೆ ತಾವು ಉತ್ತರ ರೆಡಿಯಾಗಿಟ್ಟುಕೊಂಡಿರಬೇಕು.

ಶ್ರೀ ವಾಟಾಳ್‌ನಾಗರಾಜ್: ಮೊದಲಿನಿಂದಲೂ ನಿರಂತರವಾಗಿ ಅವರ ಬಗ್ಗೆ ಆಸಕ್ತಿಯಿದೆ. ಚುನಾವಣೆಯಲ್ಲಿ ಅವರ ಮತ ಕೇಳುವುದರಿಂದ ಅಂದರೆ, ಅವರ ಪರವಾಗಿ ಯಾರು ಹೋರಾಟ ಮಾಡಿದ್ದಾರೆ ಅವರು ಮತ ಕೇಳುವುದರಲ್ಲಿ ತಪ್ಪೇನಿದೆ? ಅವರಿಗೆ ಅವರು ಮತ ಕೊಡಲೇಬೇಕು. ಇದರಲ್ಲಿ ತಪ್ಪೇನಿದೆ? ಬಹಿರಂಗವಾಗಿ ಅಂತರಂಗವಾಗಿ ಯಾವುದೂ ಇಲ್ಲ, ಇದು ಸ್ಪಷ್ಟ ಅದರಲ್ಲಿ ಏನಿದೆ?

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಮಾನ್ಯಅ ಧ್ಯಕ್ಷರೆ, ಈಗಾಗಲೇ 20 ಫಲಾನುಭವಿಗಳನ್ನು ಗುರುತಿಸಿ ಸಾಲ ಒದಗಿಸಲಾಗಿದೆ. ಆದರೂ 'ಬೆಳ್ಳಿಬೆಳಕು'

ಯೋಜನೆಯಲ್ಲಿ ಚಾಮರಾಜನಗರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮನೆಗಳನ್ನು ಕಟ್ಟತಕ್ಕ ಕಾರ್ಯಕ್ರಮದಲ್ಲಿ ಹಣಕಾಸಿನ ತೊಂದರೆಯಿಂದ ಕಳೆದ ಸಲ ನಾವು ಮನೆಗಳನ್ನು ಕಟ್ಟಲಿಕ್ಕೆ ಆಗಲಿಲ್ಲ. ಒಂದು ಕೋಟಿ ರೂಪಾಯಿ ಮಾತ್ರ ಈ ಯೋಜನೆಯಲ್ಲಿ ಹಣ ಇರುವುದರಿಂದ ಈಗ ಹೆಚ್ಚಿಗೆ ಹಣವನ್ನು ಕೇಳಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಕೊಡತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ಹೇಳಿದ ಅಂಕಿಅಂಶಗಳ ಪ್ರಕಾರ ಮಾಹಿತಿ ತರಿಸಿದ್ದೇನೆ. 5 ಲಕ್ಷ 33 ಸಾವಿರ ಜನರು ಇದ್ದಾರೆ. ಅವರು ಸಮಿತಿ ಮಾಡಬೇಕೆಂದು ಕೇಳುತ್ತಿದ್ದಾರೆ. ಸಮಿತಿ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ನಾನು ತಮಗೆ ಹೇಳುತ್ತೇನೆ, ಸಾರಸಗಟಾಗಿ ಆಗುವುದಿಲ್ಲವೆಂದು ಹೇಳುವುದಕ್ಕೆ ಬದಲಾಗಿ ತಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಅಂಕಿಅಂಶಗಳನ್ನು ಕೊಟ್ಟು ಆಮೇಲೆ ಅದಕ್ಕೆ ಬರುತ್ತೇನೆ. 5ಲಕ್ಷದ 23ಸಾವಿರದ 98ಜನ ಇದ್ದಾರೆಂದು ನಮ್ಮ ಅಧಿಕಾರಿಗಳು ವರದಿ ಕೊಟ್ಟಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಒಂದು ಲಕ್ಷದ 22 ಸಾವಿರದ 1896 ಜನ ಇದ್ದರೆ ಇದು ಉಪ್ಪಾರ ಸಮಾಜದಲ್ಲಿ ಬರತಕ್ಕ ಜನ ಈಗ ಇನ್ನೂ ಹೆಚ್ಚಾಗಿರಬಹುದು.

ಶ್ರೀ ವಾಟಾಳ್‌ನಾಗರಾಜ್: ನನ್ನ ಪ್ರಕಾರ ಮೈಸೂರು ಜಿಲ್ಲೆ ಒಂದರಲ್ಲೆ 15 ಲಕ್ಷ ಜನರಿದ್ದಾರೆ. ಕೊಳ್ಳೇಗಾಲ, ಸಂತೇಮಾರನಹಳ್ಳಿ, ಯಳಂದೂರು, ಗುಂಡ್ಲುಪೇಟೆ, ಟಿ.ನರಸೀಪುರ, ಹೆಗ್ಗಡದೇವನ ಕೋಟೆ, ಮೈಸೂರು ಜಿಲ್ಲೆ ಒಂದನ್ನೇ ತೆಗೆದುಕೊಂಡರೆ ಯಾವ ಜನಾಂಗದ ಬಗ್ಗೆ ತಾವು ಹೇಳುತ್ತಿದ್ದೀರಿ ಆ ಜನಾಂಗದ ಕನಿಷ್ಟ 20 ಲಕ್ಷ ಜನ ಅಲ್ಲಿದ್ದಾರೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಅದರ ಬಗ್ಗೆ ಸಂಪೂರ್ಣ ಮಾಹಿತಿ ತರಿಸಿಕೊಂಡು ನಾಳೆ ಮಾನ್ಯ ವಾಟಾಳ್ ನಾಗರಾಜ್ ಅವರ ಜೊತೆ ಮಾತನಾಡಿ ಅವರಿಗೆ ಏನು ಕಾರ್ಯಕ್ರಮಗಳನ್ನು ಕೊಡಬೇಕು, ಎಷ್ಟು ಮನೆಗಳನ್ನು ಕಟ್ಟಬೇಕು ಎನ್ನುವ ಬಗ್ಗೆ ಅವರ ಜೊತೆ ಸಮಾಲೋಚನೆ ಮಾಡಿ ಕಾರ್ಯಕ್ರಮವನ್ನು ರೂಪಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ಮೊದಲಿನಿಂದಲೂ ಕಾರ್ಯರೂಪವೆಂದು ಹೇಳಿಕೊಂಡು ಬಂದಿದ್ದಾರೆ. ಅವರ ಉತ್ತರದ ಬಗ್ಗೆ ನನಗೆ ಭರವಸೆ ಇಲ್ಲ. ತಾವು ಬೇಜಾರು ಮಾಡಿಕೊಳ್ಳಬೇಡಿ; ಪದೇಪದೇ ಧರಣಿ ಮಾಡಲಿಕ್ಕೆ ಬರುತ್ತಾರೆಂದು, ನಾನು ಧರಣಿ ಮಾಡುತ್ತೇನೆ. ನನಗೆ ಬಹಳ ನೋವಾಗುತ್ತಿದೆ, ಈ ಬಗ್ಗೆ ಅವರು ಒಂದು ಸ್ಪಷ್ಟವಾದ ಭರವಸೆಯನ್ನು ಕೊಡಲಿ. ಅದರ ಬಗ್ಗೆ ಒಂದು ಸಮಿತಿಯನ್ನು ಮಾಡುತ್ತೇನೆಂದು ನೇರವಾಗಿ ಹೇಳಲಿ. ಸಮಿತಿ ಮಾಡಿ ಈ ಜನಾಂಗದವರಿಗೆ ಒಂದು ಕಲ್ಯಾಣ ಮಾಡಲಿಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಯೆಂದು ಹೇಳುತ್ತೇನೆ.

ಅಧ್ಯಕ್ಷರು: ಸಮಿತಿ ರಚನೆ ಮಾಡುವುದಕ್ಕೆ ಅವರು ಮುಖ್ಯಮಂತ್ರಿಗಳ ಜೊತೆ ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಮಗೆ ತಿಳಿಸುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ನಮ್ಮ ಕ್ಷೇತ್ರದಲ್ಲಿ 20 ಸಾವಿರ ಕುಟುಂಬಗಳಿಗೆ ಒಂದು ಮನೆ ಸಹ ಕೊಡಲಿಲ್ಲ. ಸಂತೇಮಾರನಹಳ್ಳಿ, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಇಲ್ಲಿ ಈ ಜನಾಂಗದವರು ಏನಿದ್ದಾರೆ ಅದರ ಬಗ್ಗೆ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆಯೆ? ಸುಮ್ಮನೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ತೀವ್ರ ಪರಿಶೀಲನೆ ಮಾಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು ಬೇಜಾರು ಮಾಡಿಕೊಳ್ಳಬೇಡಿ. ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಿಂದ ನನಗೆ ತೃಪ್ತಿಯಾಗಿಲ್ಲ ನನಗೆ ಬಹಳ ನೋವಾಗುತ್ತಿದೆ. ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ

40 (192)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ರೇಷ್ಮೆ ಬೆಳೆಗಾರರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸಲು ಹಾಗೂ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 3,33,339 ಅನುಬಂಧದಲ್ಲಿ ಲಗತ್ತಿಸಿದೆ.

ಆ) ಕಾರ್ಯಕ್ರಮಗಳೆಂದರೆ

1. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಗೆ ಸಹಾಯ ಅನುದಾನ.,

2. ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೇಷ್ಮೆ ವ್ಯವಸಾಯದಾರರಿಗೆ